


# ಪ್ರಾಜೆಕ್ಟ್ ವರ್ಕ್!

**ಶಾಲೆಯ ಹೋಮ್‌ವರ್ಕ್, ಪ್ರಾಜೆಕ್ಟ್ ವರ್ಕ್‌ಗಳು ಮಕ್ಕಳಿಗಿಂತ ಅಪ್ಪ ಅಮ್ಮಂದಿರಿಗೆ ಟೆನ್ಷನ್ ಕೊಡುವುದೇ ಹೆಚ್ಚು. ಮಕ್ಕಳು ಶಾಲೆಯಲ್ಲಿ ಒಂದಿಷ್ಟು ಹಿಂದೆ ಉಳಿದರೂ ಪೋಷಕರ ತಳಮಳ ಹೇಳತೀರದು...**

**■ ಮಾಲತಿ ಮುದಕವಿ**

ಈ ಬಾರಿ ನಾವು ಮಗಳ ಊರಿಗೆ ಹೋಗಿದ್ದು ಭರ್ತಿ ಮೊಮ್ಮಗಳ ಆ ಶೈಕ್ಷಣಿಕ ವರ್ಷ ಮುಗಿಯುತ್ತ ಬಂದಿರುವ ಸಮಯದಲ್ಲಿಯೇ. ಅಂದರೆ ನಿಮಗೇ ಗೊತ್ತಲ್ಲ, ಮಕ್ಕಳಿಗೆ ತಮ್ಮ ಮಕ್ಕಳ ಶಾಲೆಯ ಹೋಮ್‌ವರ್ಕ್ ಟೆನ್ಷನ್ ಎಷ್ಟಿರುತ್ತದೆ ಎಂದು.

ನಾವು ಇಬ್ಬರೂ ಹೋದೊಡನೆಯೇ ನನ್ನ ಮಗಳಿಗೆ ಸಂತೋಷವಾಗಿತ್ತು. ಅದಕ್ಕೆ ಕಾರಣ ಮಗಳ ಮುಂದಿನ ಪ್ರಾಜೆಕ್ಟ್ ವರ್ಕ್ ಮುಗಿಸಲು ತನಗೆ ಸಮಯ ಸಿಗುವುದು ಎಂದು! ನನಗೆ ಇವಳ ಮಗಳ ಪ್ರಾಜೆಕ್ಟ್ ಇವಳೇಕೆ ಮುಗಿಸಬೇಕು? ಈ ಪುಟ್ಟ ಮೊಮ್ಮಗಳ ಪ್ರಾಜೆಕ್ಟ್ ಏನಿರಬಹುದು ಎನ್ನುವುದೇ ಅರ್ಥವಾಗಿರಲಿಲ್ಲ. ಆದರೂ ಅಜ್ಜಳೆಂದು ತೋರಿಸದೆ ಪೆಚ್ಚು ನಗೀ ನಕ್ಕು ಸುಮ್ಮನಾಗಿದ್ದೆ.

ಅಂದು ಮಗಳು ತನ್ನ ದೊಡ್ಡ ಮಗಳನ್ನು ಶಾಲೆಯಿಂದ ಕರೆದುಕೊಂಡು ಮನೆಗೆ ಬಂದಾಗ ತಲೆಯ ಮೇಲೆ ಆಕಾಶವೇ ಕಡಿದುಬಿದ್ದಂತೆ ಮುಖ ಮಾಡಿದ್ದಳು. ನನಗೆ ದಿಗಿಲಾಗಿತ್ತು. ಆಕೆಯ ಮಗಳು, ಎಂದರೆ ನನ್ನ ತುಂಟ ಮೊಮ್ಮಗಳು ಶಾಲೆಯಲ್ಲಿ ಏನಾದರೂ ಕೆಟ್ಟ ಕೆಲಸ ಮಾಡಿದ್ದಾಳೆಯೇ, ಯಾರನ್ನಾದರೂ ಹೊಡೆದು ಬಡಿದು ಎಂದು... ಏಕೆಂದರೆ ನನ್ನ ಮಗಳು ಚಿಕ್ಕವಳಿದ್ದಾಗ ಬರುತ್ತಿದ್ದ ಕಂಪ್ಲೇಂಟುಗಳಿಂದಾಗಿ ಬೇಸತ್ತು ಹೋಗಿದ್ದೆ. ಆಕೆಯ ಪ್ರೈಮರಿ ಮುಗಿದು ಆಕೆ ಸ್ವಲ್ಪ ತಿಳಿವಳಿಕಸ್ಥಳಾಗಿರಬಹುದೆಂಬ ಭಾವನೆ ಬಂದಾಗ ನಾನು ನಿಟ್ಟುಸಿರು ಬಿಟ್ಟಿದ್ದೆ.

‘ಪುಟ್ಟೀ ಬಾರವಾ ಊಟಕ್ಕ. ನಿನಗ ಪ್ರೀತಿ ಅಂತ ಇವತ್ತು ಪುರಿ, ಖೀರು ಮಾಡೇನಿ. ನಿಮ್ಮ ಮಮ್ಮಾಗೂ ಕರೀ’ ತಟ್ಟೆಯನ್ನು ಇಟ್ಟು ಇಬ್ಬರನ್ನೂ ಕರೆದಿದ್ದೆ. ಅವಳು ‘ತಡೀ ಅಜ್ಜಿ, ಬಂದೆ’ ಎಂದವಳು ಬಾರದೆ ಹೋದಾಗ ನಾನೇ ಹೊರಗೆ ಬಂದಿದ್ದೆ.

‘ಸೋನೂ, ನಾ ಎಷ್ಟು ತ್ರಾಸು ತೊಗೊಂಡು ನಿನ್ನ ಪ್ರಾಜೆಕ್ಟ್ ವರ್ಕ್ ಮಾಡಿದ್ದೆ ಈ ಸರತೆ. ಅದರ